**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 91/2020**

**ಚಾ.ಸಾಃ 14, ಫ್ರಾ.ಸಾಃ 8**

| | |
|---|---|
| ಸಾಕ್ಷಿದಾರನ ಹೆಸರು | ಅನಿಲ್ ಶೇಟ್ |
| ತಂದೆಯ ಹೆಸರು | ಅಣ್ಣಪ್ಪ ಶೇಟ್ |
| ವಯಸ್ಸು | 38 ವರ್ಷ |
| ಉದ್ಯೋಗ | ಬಂಗಾರದ ಕೆಲಸ |
| ವಾಸ್ತವ್ಯ | ಬಗ್ಗೋಣ, ಕುಮಟಾ |

**ಸಾಕ್ಷಿಯನ್ನು ದಿನಾಂಕಃ 19-07-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಗೊತ್ತು. ಆತ ನಮ್ಮ ಅಂಗಡಿಗೆ ಬಂದು ಬಂಗಾರದ ಒಡವೆಗಳನ್ನು ತೆಗೆದುಕೊಂಡು ಹೋಗಲು ಬರುತ್ತಿದ್ದರು. ಐದು ವರ್ಷದ ಹಿಂದೆ ಒಂದು ದಿನ 2 ನೇ ಆರೋಪಿ ತನ್ನ ತಂಗಿ ಮದುವೆಗೆ ಮಾಡಿರುವ ಸಾಲ ತೀರಿಸಲು ಹಣ ಬೇಕು ಎಂದು 83 ಗ್ರಾಂ ಬಂಗಾರವನ್ನು ತಂದು ಇದನ್ನು ಗಿರವಿ ಇಟ್ಟುಕೊಂಡು ಹಣ ಕೊಡುವಂತೆ ಕೇಳಿದ್ದರು. ಅದರಂತೆ ಹಣ ಕೊಟ್ಟಿದ್ದೇನೆ. ತದನಂತರ ದಿನಾಂಕ 05-08-2020 ರಂದು ಪೋಲೀಸರು ಫೋನ್ ಮಾಡಿ ಠಾಣೆಗೆ ಕರೆಸಿದ್ದರು. ಠಾಣೆಯಲ್ಲಿ 2 ನೇ ಆರೋಪಿ ಕಳುವು ಮಾಡಿದ ಒಡವೆಗಳನ್ನು ನಿಮ್ಮ ಬಳಿ ಗಿರವಿ ಇಟ್ಟಿರುವುದಾಗಿ ಮತ್ತು ಸದರಿ ಒಡವೆಗಳನ್ನು ತಂದುಕೊಡಬೇಕೆಂದು ತಿಳಿಸಿದರು. ಅದರಂತೆ 2 ನೇ ಆರೋಪಿ ನನ್ನ ಬಳಿ ಗಿರವಿ ಇಟ್ಟಿದ್ದ ಬಂಗಾರದ ಒಡವೆಗಳನ್ನು ಪೋಲೀಸ್ ಠಾಣೆಗೆ ತಂದು ಹಾಜರುಪಡಿಸಿರುತ್ತೇನೆ. ಆಗ ಪೋಲೀಸರು ಅವುಗಳನ್ನು ಫೋಟೋ ತೆಗೆದು ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಈಗ ಸಾಕ್ಷಿ ಪಂಚನಾಮೆಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋದ ದೃಢೀಕೃತ ನಕಲನ್ನು ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ಯಾರಾದರೂ ಒಡವೆಗಳನ್ನು ಗಿರವಿ ಇಡಲು ಬಂದರೆ ಗಿರವಿ ಇಟ್ಟುಕೊಂಡ ಬಗ್ಗೆ ರಸೀದಿ ಕೊಡುತ್ತೇವೆ ಎಂದರೆ ಸರಿ. 2 ನೇ ಆರೋಪಿ ಪರಿಚಯ ಇದ್ದದ್ದರಿಂದ ಆತನಿಗೆ ರಸೀದಿ ಕೊಟ್ಟಿರುವುದಿಲ್ಲ. ನಾನೇ ಪೋಲೀಸ್ ಠಾಣೆಗೆ ಒಡವೆಗಳನ್ನು ತಂದು ಹಾಜರುಪಡಿಸಿರುತ್ತೇನೆ. ಪೋಲೀಸರಿಗೆ ನಾನು ಹೇಳಿಕೆ

ಕೊಟ್ಟಿಲ್ಲ. ನಾನು ಪೋಲೀಸರಿಗೆ ಹಾಜರುಪಡಿಸಿದ ವಿವಿಧ ನಮೂನೆಯ ಒಡವೆಗಳ ವಿವರ ಮತ್ತು ತೂಕ ನೆನಪಿಲ್ಲ. 2 ನೇ ಆರೋಪಿ ನನ್ನ ಬಳಿ ಬಂಗಾರದ ಒಡವೆಗಳನ್ನು ಗಿರವಿ ಇಟ್ಟಿದ್ದ ಮತ್ತು ಅದನ್ನು ನಾನು ಪೋಲೀಸ್ ಠಾಣೆಗೆ ತಂದು ಹಾಜರು ಪಡಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**